1

# "ನಾವೇ ಕೇಳಿಸಿಕೊಂಡಿದ್ದೇವೆ"

ಸ್ಟಿಫನ್ ಕೊವೆಯು ತನ್ನ ಪುಸ್ತಕ *7 Habits of Highly Effective People* ಎಂಬುದರಲ್ಲಿ, ತನ್ನ ವಾಚಕರನ್ನು "ಮನಸ್ಸಿನಲ್ಲಿ ಅಂತ್ಯದೊಂದಿಗೆ ಪ್ರಾರಂಭಿಸಲು" ಪ್ರೋತ್ಸಾಹಿಸಿದನು. ಅಲೋಚನೆಯು ಭಯಂಕರವಾಗಿ ಸರಳವಾದದ್ದೂ ಮತ್ತು ಆಳವಾಗಿ ಅಗಾಥವಾದದ್ದು ಆಗಿರುತ್ತದೆ. ಕೊವೆ ಹೀಗೆ ಬರೆದನು,

> ಚಟುವಟಿಕೆಯ ಬಲೆಯಲ್ಲಿ ಕಾರ್ಯನಿರತತೆಯಲ್ಲಿ ತೋಡಗಿರುವ ಜೀವನದಲ್ಲಿ ಸಿಕ್ಕಿ ಹಾಕಿಕೊಳ್ಳವುದು ಅಗ್ರಾಹ್ಯವಾಗಿ ಸುಲಭವಾಗಿರುತ್ತದೆ. ಯಶಸ್ಸಿನ ನಿಚ್ಚಣಿಕೆಯನ್ನು ಕಠಿಣವಾಗಿ ಏರುತ್ತ ಹೋಗಿ ತಪ್ಪಾದ ಗೋಡೆಗೆ ಆತುಕೊಂಡಿದ್ದೇವೆಂದು ಮಾತ್ರ ಕಂಡುಕೊಳ್ಳುತ್ತೇವೆ.[1]

ಅವನು ಮುಂದುವರಿದು ಹೀಗೆ ಬರೆದನು,

> ನಾವು ಬಹಳ ಕಾರ್ಯನಿರತರಾಗಿರಬಹುದು, ನಾವು ಬಹಳವಾಗಿ ಸಮರ್ಥರಾಗಿರಬಹುದು, ಆದರೆ ಅಂತ್ಯವನ್ನು ಮನಸಿನಲ್ಲಿಟ್ಟುಕೊಂಡು ನಾವು ಪ್ರಾರಂಭಿಸುವಾಗ ಮಾತ್ರವೇ ನಾವು ನಿಜವಾಗಿಯೂ ಪರಿಣಾಮಕಾರಿಯಾದವರಾಗುವೆವು.[2]

ಕೊವೆಯು ವಾಚಕನಿಗೆ ಅವನ ಇಲ್ಲವೇ ಅವಳ ಸ್ವಂತ ಶವಸಂಸ್ಕಾರವನ್ನು ಕಣ್ಮುಂದೆ ಕಲ್ಪಿಸಿಕೊಳ್ಳಬೇಕೆಂದು ಕೇಳುವದರಿಂದ ತನ್ನ ವಿಷಯವನ್ನು ಮುಂದಿಟ್ಟನು. (ಬಹಳ ಇತ್ತಿಚೆಗೆ ಅದನ್ನು ಅವನು ಇಡೀ ದೃಶ್ಯವು ಬಹಳವಾಗಿ ಎದೆಗೆಡಿಸುವಂಥದ್ದಾಗ ಬಾರದೆಂದು ಸಾಕ್ಷಿಯ ಔತಣಕ್ಕೆ ಬದಲಾಯಿಸಿದ್ದಾನೆ.) ಶವಸಂಸ್ಕಾರದ ಸಮಯದಲ್ಲಿ, ನಾಲ್ಕು ಜನರು ಮಾತನಾಡಲಿಕ್ಕೆ ಎದ್ದು ಬರುವಾಗ, ಅತಿಥಿಗಳ ಮಧ್ಯದಲ್ಲಿ ಕುಳಿತಿರುವುದನ್ನು ಕಲ್ಪಿಸಿಕೊಳ್ಳಿರಿ. ಮೊದಲನೆಯವನು ನಿಮ್ಮ ಸ್ವಂತ ಕುಟುಂಬದ ಸದಸ್ಯನು. ಎರಡನೆಯವನು ನಿಮ್ಮ ಸ್ನೇಹಿತರಲ್ಲಿ ಒಬ್ಬನು, ಮೂರನೆಯವನು ಜೊತೆ ಕೆಲಸದವನು, ಮತ್ತು ಕೊನೆಯ ಭಾಷಣಕಾರನು ನೀನು ಭಾಗವಹಿಸುತ್ತಿರುವ ಸಭೆಯ ಸದಸ್ಯರು. ಅವರು ನಿನ್ನ ಬಗ್ಗೆ ಏನನ್ನು ಹೇಳಬೇಕೆಂದು ನೀನು ನಿರೀಕ್ಷಿಸುತ್ತೀ? ಅವರು ನಮಗೆ ಏನನ್ನು ಹೇಳಬೇಕೆಂಬುದನ್ನು ನಾವು ಬಯಸುವುದು ನಾವು ಜೀವಿಸುವದಕ್ಕಾಗಿ ಮಾರ್ಗದರ್ಶನದ ತತ್ವಗಳಾಗಿರಬೇಕೆಂದು ಕೊವೆ ಸಲಹೆ ಮಾಡಿದ್ದಾನೆ. ನಮ್ಮ ಜೀವಿತಗಳ ಅಂತ್ಯವನ್ನು ಕಲ್ಪಿಸುವುದರಿಂದ ಇಂದು ಜೀವಿಸಲಿಕ್ಕೆ ನಾವು ಹೆಚ್ಚು ಉತ್ತಮವಾಗಿ ಸಿದ್ಧರಾಗಿರಬಹುದು.

ಯೋಹಾನನ ಸುವಾರ್ತೆಯ ಅಧ್ಯಯನವನ್ನು ನಾವು ಪ್ರಾರಂಭಿಸುವಂತೆ, ನಾವು ಅದನ್ನೇ ಮಾಡಲು ಬಯಸುತ್ತೇವೆ: ಮನಸ್ಸಿನಲ್ಲಿ ಅಂತ್ಯದಿಂದ ಪ್ರಾರಂಭಿಸುವುದು ಸುದೈವದಿಂದ, ಈ ಸುವಾರ್ತೆಯ ಕೇಂದ್ರಿಕರಿಸುವಿಕೆಯು ಮತ್ತು ಗುರಿಯು ಸ್ಪಷ್ಟವಾಗಿ ವ್ಯಕ್ತಪಡಿಸಲ್ಪಟ್ಟಿದೆ, ಮತ್ತು ಈ ಅಧ್ಯಯನದಲ್ಲಿ ನಾವು ಎಲ್ಲಿಗೆ ಹೊರಟಿದ್ದೇವೆ ಎಂಬುದನ್ನು ಯೋಹಾನ 4:39-42 ಚಿತ್ರಿಸುತ್ತದೆ.

## ಯೇಸು ಮತ್ತು ಸಮಾರ್ಯದ ಸ್ತ್ರೀ

ಯೋಹಾನ 4ರಲ್ಲಿ ಯೇಸುವು ಮತ್ತು ಆತನ ಶಿಷ್ಯರು ಇಸ್ರಾಯೇಲಿನ ದಕ್ಷಿಣದಲ್ಲಿಯ ಯೂದಾಯವನ್ನು ಬಿಟ್ಟು ಉತ್ತರದಲ್ಲಿ ಗಲಿಲಾಯದ ಕಡೆಗೆ ಹೊರಟರು. ಈ ಎರಡು ಪ್ರದೇಶಗಳ ಮಧ್ಯದಲ್ಲಿ ಸಮಾರ್ಯವು ಇತ್ತು. ಅಲ್ಲಿ ವಾಸಿಸುತ್ತಿದ್ದ ಜನರು ಯೆಹೂದ್ಯರಿಂದ ಸಂಶಯದಿಂದಲೂ, ತುಚ್ಛವಾಗಿಯೂ ಕಾಣಲ್ಪಡುತ್ತಿದ್ದರು, ಆದುದರಿಂದ ಜಾಗರುಕತೆಯುಳ್ಳ ಯೆಹೂದ್ಯರು ಆ ಪ್ರದೇಶವನ್ನು ತಪ್ಪಿಸಿಕೊಳ್ಳಲು ಸಾಧ್ಯವಾದ ಪ್ರತಿಯೊಂದನ್ನು ಮಾಡುತ್ತಿದ್ದಿರು. ಹೀಗಿದ್ದರೂ, ಯೇಸು ಮತ್ತು ಆತನ ಶಿಷ್ಯರು ಸಮಾರ್ಯದ ಮುಖಾಂತರ ಪ್ರಯಾಣ ಮಾಡಿದರು. ಯಾಕೋಬನ ಬಾವಿ ಎಂದು ತಿಳಿದ ಸ್ಥಳವನ್ನು ಅವರು ತಲುಪಿದಾಗ ಅವರು ದಣಿದವರೂ, ಹಸಿದವರೂ ಆಗಿದ್ದರು. ಯೇಸುವು ವಿಶ್ರಾಂತಿ ಪಡೆಯಲು ಕುಳಿತುಕೊಂಡಾಗ, ಶಿಷ್ಯರು ಸುಖರ ಪಟ್ಟಣದ ಸಮೀಪದಲ್ಲಿ ತಿನ್ನಲಿಕ್ಕೆ ಏನಾದರೂ ಕೊಂಡು ತರಲಿಕ್ಕೆ ಹೋದರು. ಅಲ್ಲಿ ಆತನು ಒಬ್ಬನೇ ಇದ್ದಾಗ, ನೀರು ಸೇದಲು ಒಬ್ಬ ಮಹಿಳೆ ಬಂದಳು, ಯೇಸು ಹಾಗು ಈ ಸ್ತ್ರೀಯ ಮಧ್ಯದಲ್ಲಿಯ ಸಂಭಾಷಣೆಯ ಸಮಯದಲ್ಲಿ ಸಮಾರ್ಯದಲ್ಲಿ ವಿಶ್ವಾಸದ ಪಯಣವು ಪ್ರಾರಂಭವಾಯಿತು!

ಸಂಭಾಷಣೆಯು ತನ್ನ ವೈಯಕ್ತಿಕ ಜೀವನದ ಕಡೆಗೆ ತಿರುಗಿಕೊಂಡಾಗ, ಸಮಾರ್ಯದ ಸ್ತ್ರೀಯು ಯೇಸುವು ಅಸಾಮಾನ್ಯನಾದವನು ಎಂಬುದನ್ನು ಅರ್ಥಮಾಡಿಕೊಂಡಳು. "ಹೋಗಿ ನಿನ್ನ ಗಂಡನನ್ನು ಇಲ್ಲಿಗೆ ಕರೆದು ಕೊಂಡು ಬಾ" ಎಂದು ಆತನು ಆಕೆಗೆ ಹೇಳಿದನು (4:16). ಆಕೆಯು ಆತನಿಗೆ ತನಗೆ ಗಂಡನಿಲ್ಲವೆಂದು ಹೇಳಿದಳು. "ನನಗೆ ಗಂಡನಿಲ್ಲವೆಂದು ನೀನು ಹೇಳಿದ್ದು ಸರಿಯಾದ ಮಾತು, ನಿನಗೆ ಐದು ಮಂದಿ ಗಂಡಂದಿರಿದ್ದರು. ಈಗ ಇರುವವನು ನಿನಗೆ ಗಂಡನಲ್ಲ; ನೀನು ಹೇಳಿದ್ದು ನಿಜವಾದ ಸಂಗತಿ" ಎಂದು ಯೇಸು ಉತ್ತರ ಕೊಟ್ಟನು (4:17, 18). ಇದಕ್ಕೆ ಆ ಸ್ತ್ರೀಯು, "ಅಯ್ಯಾ, ನೀನು ಪ್ರವಾದಿಯೆಂದು ನನಗೆ ಕಾಣುತ್ತದೆ" (4:19) ಎಂದು ಘೋಷಿಸಿದಳು.

ಯೇಸು ಮತ್ತು ಸ್ತ್ರೀಯು ತಮ್ಮ ಸಂಭಾಷಣೆಯನ್ನು ಮುಂದುವರಿಸಿದರು. ಆರಾಧನೆ ಬರಲಿಕ್ಕಿದ್ದ ಮೆಸ್ಸೀಯ, ಮತ್ತು ಯೇಹೂದಿ ಸಮಾರ್ಯರ ಸಮಸ್ಯೆ ಇಂಥ ವಿಷಯಗಳನ್ನು ಚರ್ಚಿಸಿದರು. ಯೇಸುವಿನ ಶಿಷ್ಯರು ಹಿಂದಿರುಗಿದಾಗ, ಆ ಸ್ತ್ರೀಯು (ನೀರಿನ ಕೊಡವನ್ನು ಬಾವಿಯ ಬಳಿಯಲ್ಲಿ ಬಿಟ್ಟು) ಯೇಸುವಿನೊಂದಿಗಿನ ತನ್ನ ಸಂವಾದದ ಬಗ್ಗೆ ಜನರಿಗೆ ಹೇಳಲು ಊರೊಳಗೆ ಹೋದಳು, "ಅಲ್ಲಿ ಒಬ್ಬನಿದ್ದಾನೆ, ನಾನು ಇದುವರೆಗೆ ಮಾಡಿದ್ದನ್ನೆಲ್ಲಾ ನನಗೆ ಹೇಳಿದನು; ಬಂದು ಅವನನ್ನು ನೋಡಿರಿ: ಬರತಕ್ಕ ಕ್ರಿಸ್ತನು ಅವನೇ ಏನೋ?" (4:29) ಎಂದು ಆಕೆ ಹೇಳಿದಳು. ಈ ರೀತಿಯಲ್ಲಿ ಆಕೆ ಇತರರನ್ನು ವಿಶ್ವಾಸದ ಪಯಣದಲ್ಲಿ ಪ್ರಾರಂಭಿಸುವಂತೆ ಮಾಡಿದಳು.

## ಯೇಸು ಮತ್ತು ಸಮಾರ್ಯರು

ಸುಖರಿನ ಜನರು ಯಾಕೋಬನ ಬಾವಿಯ ಬಳಿಗೆ ಬಂದರು, ಆ ಸ್ತ್ರೀಯು ಅವರಿಗೆ ಹೇಳಿದ್ದೆಲ್ಲದರ ಕಾರಣದಿಂದ ಅವರಿಗೆ ಆಗಲೇ ಯೇಸುವಿನಲ್ಲಿ ನಂಬಿಕೆಯುಂಟಾಗಿತ್ತು (4:39). ಅದರ ಪರಿಣಾಮವಾಗಿ ಆತನು ತಮ್ಮೊಂದಿಗೆ ಇರಬೇಕೆಂದು ಬೇಡಿಕೊಂಡರು. ("ಬೇಡಿಕೊಳ್ಳು" ಎಂಬ ಕ್ರಿಯಾ ಪದದ ನಿರಂತರವಾದ ಪಟ್ಟು ಹಿಡಿದ ಕೃತ್ಯವನ್ನು ಗಮನಿಸಿರಿ.) ಯೇಸುವು ಒಪ್ಪಿಕೊಂಡನು ಮತ್ತು ಇನ್ನೂ ಎರಡು ದಿನ ಅಲ್ಲಿ ಉಳಿದು ಕೊಂಡನು. ಪರಿಣಾಮವಾಗಿ "ಹೆಚ್ಚು ಜನರು ಆತನ ವಾಕ್ಯವನ್ನು ಕೇಳಿ ನಂಬಿದರು" (4:41). ಈ ಘಟನೆಯ ಮುಕ್ತಾಯವು ತಮಗೆ ಯೇಸುವಿನ ಬಗ್ಗೆ ಮೊದಲು ಹೇಳಿದ ಸ್ತ್ರೀಗೆ ಸಮಾರ್ಯದ ಜನರಿಂದ ಕೊಡಲ್ಪಟ್ಟ ಹೇಳಿಕೆಯಾಗಿದೆ, ಅವರ ಮಾತುಗಳು ನಮಗೆ ವಿಶ್ವಾಸ ಪಯಣದ ಒಂದು ಮಾರ್ಗ ನಕಾಶೆಯನ್ನು ಒದಗಿಸುತ್ತವೆ. "ನಾವು ಆತನನ್ನು ನಂಬಿರುವುದು ಇನ್ನು

ನಿನ್ನ ಮಾತಿನ ಮೇಲೆ ಅಲ್ಲ; ನಾವು ಕಿವಿಯಾರ ಕೇಳಿ ಈತನು ಲೋಕರಕ್ಷಕನೇ ಹೌದೆಂದು ತಿಳಿದುಕೊಂಡಿದ್ದೇವೆ" (4:42). ಅವರು ಮೊದಲು "ಆ ಸ್ತ್ರೀಯ ಮಾತಿನ ಪ್ರಕಾರ ನಂಬುವವರಾದರು" (4:39), ಆದರೆ ಅನಂತರ ಅವರು "ಆತನ ವಾಕ್ಯವನ್ನು ಕೇಳಿ ನಂಬಿದರು" (4:41)! ಬೇರೆಯವರಿಂದ ಬಂದ ದ್ವಿತೀಯ ವಿಶ್ವಾಸದಂತೆ ಪ್ರಾರಂಭವಾದದ್ದು ಯೇಸು ಎಂದು ಕರೆಯಲ್ಪಟ್ಟ ಈ ಒಬ್ಬಾತನೊಂದಿಗೆ ವೈಯಕ್ತಿಕ ಅನುಭವದ ಕಾರಣದಿಂದ ಪಕ್ವವಾಯಿತು!

## ಯೇಸು ಮತ್ತು ನಾವು

ನಮಲ್ಲಿ ಹೆಚ್ಚಾದವರು ನಂಬಿಕೆಯ ಪ್ರಯಾಣವನ್ನು ಆ ಸಮಯದಲ್ಲಿ ನಮಗಿಂತಲೂ ಹೆಚ್ಚು ಬಲವುಳ್ಳವರ ಹಾಗು ಹೆಚ್ಚು ನಿಶ್ಚತತೆಯುಳ್ಳವರ ನಂಬಿಕೆಯ ಬೆನ್ನ ಮೇಲೆ ನಡೆಯುವುದರಿಂದ ಪ್ರಾರಂಭಿಸುತ್ತೇವೆ. ಅನೇಕರಿಗೆ ಅದು ತಮ್ಮ ತಂದೆ ತಾಯಿಗಳ ನಂಬಿಕೆಯಾಗಿರುತ್ತದೆ. ನಾವು ಅವರ ನಂಬಿಕೆಯನ್ನು ಹಾಗು ಪ್ರತಿಷ್ಠಿಸುವಿಕೆಯನ್ನು ನೋಡುತ್ತೇವೆ ಮತ್ತು ಅವರಿಗಾಗಿ ನಮ್ಮ ಗೌರವದಿಂದ, ಅವರು ನಂಬಿದ್ದನ್ನು ಸತ್ಯವಾಗಿರಬೇಕೆಂದು ಒಪ್ಪಿಕೊಳ್ಳುತ್ತೇವೆ. ಇತರರಿಗೆ ಒಬ್ಬ ಸ್ನೇಹಿತನ ನಂಬಿಕೆಯಾಗಿರಬಹುದು. ನಾವು ಸಂಶಯಗಳಿಂದ ತುಂಬಿರುವ ಸಮಯದಲ್ಲಿ, ನಮ್ಮ ಸ್ನೇಹಿತರ ಧೈರ್ಯ ಹಾಗು ನಿಶ್ಚಿತತೆಗೆ ಅಂಟಿಕೊಳ್ಳುತ್ತದೆ. ಇನ್ನೂ ಇತರರಿಗೆ, ಒಬ್ಬ ಗೌರವಾನ್ವಿತ ಪ್ರಸಂಗಿಯ, ಒಬ್ಬ ವಿಶೇಷ ಬೋಧಕನ ಇಲ್ಲವೇ ಒಬ್ಬ ಪ್ರೀತಿಯ ಯುವ ಸೇವಕನ ಜೀವನ ಮತ್ತು ಮಾತುಗಳ ಮೇಲೆ ನಂಬಿಕೆಯು ಕಟ್ಟಲ್ಪಟ್ಟಿರ ಬಹುದು.

ಯಾರೊಬ್ಬರ ಬೆನ್ನ ಮೇಲೆ ತನ್ನ ಪ್ರಯಾಣವನ್ನು ಪ್ರಾರಂಭಿಸುವ ವಿಶ್ವಾಸವು *ಕೆಟ್ಟದಾಗಿರುವುದಿಲ್ಲ,* ಅದು ಸ್ವಾಭಾವಿಕವಾದದ್ದು ಹಾಗು ಸಾಮಾನ್ಯವಾದದ್ದು ಆಗಿರುತ್ತದೆ - ವಿಶೇಷವಾಗಿ ತಂದೆ ತಾಯಿಗಳಿಂದ ನಿರೀಕ್ಷಿಸಲ್ಪಡುವಂಥದ್ದೂ ಪ್ರಾರ್ಥಿಸಲ್ಪಡುವಂಥದ್ದೂ ಆಗಿರುತ್ತದೆ. ಈ ರೀತಿಯಲ್ಲಿಯ ನಂಬಿಕೆಯೊಂದಿಗೆ ಕೇವಲ ಸಮಸ್ಯೆಯು ಅದು ಬೆಳೆಯುವಲ್ಲಿ ಹಾಗೂ ಆಳವಾಗಿಯೂ ಬಲವಾಗಿಯೂ ಪಕ್ವವಾಗುವುದರಲ್ಲಿ ಸೋಲುವಾಗ ಏಳುತ್ತದೆ. ಕೊನೆಗೆ, ಬೇರೆಯವರ ನಂಬಿಕೆಯ ಮೇಲೆ ಕಟ್ಟಲ್ಪಟ್ಟ ನಂಬಿಕೆಯು ತೃಪ್ತಿಕೊಡದಿರುವಂಥದ್ದು ಆಗಿರುತ್ತದೆ ಮತ್ತು ಪ್ರಾಪ್ತವಯಸ್ಸಿನ ಭಾರವನ್ನು ಹೊತ್ತುಕೊಳ್ಳಲಾರದು.

ಈ ರೀತಿಯಲ್ಲಿ, ವಿಶ್ವಾಸವು ಶಿಶುವಿನ ಜೋಕಾಲಿಯಂತೆ ಇರುತ್ತದೆ. ನನ್ನ ಹೆಣ್ಣುಮಕ್ಕಳು ಬಹಳ ಚಿಕ್ಕವರಾಗಿದ್ದಾಗ ಶಿಶುಗಳ ಉಯ್ಯಾಲೆಯಲ್ಲಿ ತೂಗಾಡುವದರಲ್ಲಿ ಇಬ್ಬರು ಆನಂದ ಪಡುತ್ತಿದ್ದರು. ಅವರ ತಾಯಿ ಅಡಿಗೆ ಮನೆಯಲ್ಲಿ ಅಡಿಗೆ ಮಾಡುತ್ತಿದ್ದಾಗ ಇಲ್ಲವೇ ನಾನು ನನ್ನ ಡೆಸ್ಕಿನ ಮೇಲೆ ಕುಳಿತು ಅಭ್ಯಾಸ ಮಾಡುವಾಗ, ಅವರು ತೃಪ್ತಿಯಿಂದ ತೂಗಾಡುತ್ತಿದ್ದರು. ಆ ವಯಸ್ಸಿನಲ್ಲಿ ಅವರಿಗೆ ಅಗತ್ಯವಾದಷ್ಟು ಶಿಶುಗಳ ಉಯ್ಯಾಲೆಯು ಬಲವಾದ್ದಗಿರುತ್ತಿತ್ತು. ಅದು ಅವರನ್ನು ಸುರಕ್ಷಿತವಾಗಿ, ಭದ್ರವಾಗಿ, ಆನಂದದಿಂದ ಇಡುತ್ತಿತ್ತು. ಹೀಗಿರುವಾಗ ಈಗ ನನ್ನ ಹೆಣ್ಣು ಮಕ್ಕಳು ಹನ್ನೊಂದು ಮತ್ತು ಹದಿಮೂರು ವರ್ಷ ವಯಸ್ಸಿನವರಾಗಿದ್ದಾರೆ, ಇಂದು ಅವರು ಹಳೇ ಜೋಕಾಲಿಯಲ್ಲಿ ಕುಳಿತು ಕೊಳ್ಳಲು ಪ್ರಯತ್ನಿಸಿದರೆ, ಅದೊಂದು ಭಿನ್ನವಾದ ಅನುಭವವಾಗಿರುವುದು. ಅದರಲ್ಲಿ ಅವರು ಕುಳಿತು ಕೊಳ್ಳಲಿಕ್ಕಾಗುವದಿಲ್ಲ ಮತ್ತು ಇಡೀ ಉಯ್ಯಾಲೆಯು ಬಹುಶಃ ಬಿದ್ದುಬಿಡುವುದು. ಅದು ಉಯ್ಯಾಲೆಯನ್ನು ಕೆಟ್ಟಾದ್ದಾಗಿ ಮಾಡುವುದೋ? ನಿಶ್ಚಯವಾಗಿಯೂ ಇಲ್ಲ! ಅವರು ಅದನ್ನು ಮೀರಿ ಬೆಳೆದಿದ್ದಾರೆ ಮತ್ತು ಈಗ ಅವರ ಹೆಚ್ಚಿನ ಭಾರವನ್ನು ಹೊರುವಂಥದ್ದು ಅವರಿಗೆ ಬೇಕಾಗುತ್ತದೆ.

ನಂಬಿಕೆಯು ಅದರಂತಿರುತ್ತದೆ. ಮೊದಲು, ಇತರರ ನಂಬಿಕೆಯ ಮೇಲೆ ಕಟ್ಟಲ್ಪಟ್ಟ ನಂಬಿಕೆಯು ನಾವು ಎದುರಿಸುವ ಜೀವನದ ವಿಷಯಗಳ ಎಲ್ಲಾ ಭಾರವನ್ನು ಹೊತ್ತುಕೊಂಡು ಹೋಗಲಿಕ್ಕೆ ಸಾಕಾದದಷ್ಟಾಗಿತ್ತು. ಜೀವನದ ಮುಖಾಂತರ ನಮ್ಮನ್ನು ನಡಿಸಲು ಇನ್ನೂ ಹೆಚ್ಚು ಬಲವಾದದ್ದು ನಮಗೆ ಬೇಕಾಗುವ ಸಮಯ ಬರುತ್ತದೆ. ಅಂಥ ಸಮಯದಲ್ಲಿ ಯೇಸುವಿನೊಂದಿಗಿನ ನಮ್ಮ ಸ್ವಂತ ಸಂಧಿಸುವಿಕೆಯ ಹಾಗು ಆತನ ಬಗೆಗಿನ ನಮ್ಮ

ಸ್ವಂತ ನಿಶ್ಚಿತತೆಯ ಮೇಲೆ ಕಟ್ಟಲ್ಪಟ್ಟ ನಂಬಿಕೆಯ ಅಗತ್ಯತೆ ನಮಗಿರುತ್ತದೆ; ಕಾಲೇಜ ಸಭೆಯೊಂದಿಗೆ ನಾನು ಕೆಲಸ ಮಾಡುತ್ತಿರುವಂತೆ, ಅನೇಕ ಯುವ ಜನರು ತೀವ್ರವಾದ ನೈತಿಕ ಶೋಧನೆಗಳನ್ನು ಎದುರಿಸುತ್ತಿರುವದನ್ನು ನಾನು ನೋಡುತ್ತಿದ್ದೇನೆ. ಇಂದಿನ ಜಗತ್ತಿನಲ್ಲಿ ಪ್ರಾಮಾಣಿಕನಾಗಿ, ಶುದ್ಧನಾಗಿ ಮತ್ತು ಶಾಂತಚಿತ್ತರಾಗಿರುವುದು ಒಂದು ಆಹ್ವಾನವಾಗಿದೆ. ಒಂದು ವೇಳೆ ವಿದ್ಯಾರ್ಥಿಗಳು ಈ ಶೋಧನೆಗಳನ್ನು ತಮ್ಮ ತಂದೆ ತಾಯಿಗಳಿಂದ ಪಡೆದ ಎರಡನೆಯ ಸಾಲಿನ ನಂಬಿಕೆಯಿಂದ ಮಾತ್ರ ಎದುರಿಸಿದರೆ, ಅವರು ದೊಡ್ಡ ತೊಂದರೆ ಯಲ್ಲಿರುತ್ತಾರೆ, ಅವರು ವಯಸ್ಕ ಹೋರಾಟಗಳನ್ನು ಎದುರಿಸುವಂತೆ, ಅವರಿಗೆ ಯೇಸುವಿನಲ್ಲಿ ಇನ್ನೂ ಹೆಚ್ಚಿನ ಪ್ರಬುದ್ಧ ವಿಶ್ವಾಸದ ಅಗತ್ಯತೆಯಿದೆ.

ಕಠಿಣವಾದ ತೀರ್ಮಾನಗಳು ಪ್ರೌಢವಸ್ಥೆಯ ಗಲಿಬಿಲಿಯ ತೊಂದರೆಗಳ ಮುಖಾಂತರ ಒಮ್ಮೆ ಮಾಡಿದ ನಂತರ ಮಾಯವಾಗಿ ಹೋಗುವುದಿಲ್ಲ. ಅನಂತರದ ವರ್ಷಗಳಲ್ಲಿ, ಹೆಚ್ಚಾದವರು ತಮ್ಮ ಮದುವೆಯನ್ನು ಕುರಿತು ಕಷ್ಟಕರವಾದ ವಿಷಯಗಳನ್ನು ಎದುರಿಸುವರು. "ಮರಣವು ನಮ್ಮನ್ನು ಅಗಲಿಸುವವರೆಗೆ" ಎಂಬುದು "ಹೋಗುವುದು ಕಠಿಣವಾಗುವವರೆಗೆ" ಎಂದರ್ಥವಾಗುವುದು ಬಂದಿರುವ ಈ ಜಗತ್ತಿನಲ್ಲಿ ವಿವಾಹವಾಗಿ ಉಳಿದಿರುವುದಕ್ಕೆ ನಾವು ಸಾಮಾಜಿಕ ಪ್ರೋತ್ಸಾಹವನ್ನು ಕಂಡುಕೊಳ್ಳುವದಿಲ್ಲ, ಕಠಿಣವಾದ ಸಮಯಗಳಲ್ಲಿ ಮದುವೆ ಯನ್ನು ಒಟ್ಟಾಗಿರುಸುವುದಕ್ಕೆ ಎರಡನೆ ಹಸ್ತದಿಂದ ಬಂದ ವಿಶ್ವಾಸಕ್ಕಿಂತ ಹೆಚ್ಚಿನದು ಬೇಕಾ ಗುತ್ತದೆ. ಸಭೆಯು ಅಂಥದೇ ಪರಿಸ್ಥಿತಿಯನ್ನು ಎದುರಿಸುತ್ತಲಿವೆ; ಹೊಸ ಒಡಂಬಡಿಕೆಯ ಪತ್ರಿಕೆಗಳಲ್ಲಿಯೂ ಸಹ, ಎಲ್ಲಾ ಸಭೆಗಳಿಗೆ ಸಮಸ್ಯೆಗಳಿವೆ ಎಂಬ ಸೂಚನೆಗಳನ್ನು ನೋಡು ತ್ತೇವೆ, ಸಭೆಯಲ್ಲಿಯ ಜನರೊಂದಿಗೆ ನಾವು ಹತಾಶರಾಗುತ್ತೇವೆ ಹಾಗೂ ಅದೆಲ್ಲದರಿಂದ ಸುಮ್ಮನೇ ಹೊರಟು ಹೋಗಲು ಬಯಸುತ್ತೇವೆ. ದ್ವಿತಿಯ ಹಸ್ತದಿಂದ ಬಂದ ನಂಬಿಕೆಯು ಕಠಿಣವಾದ ಪರಿಸ್ಥಿತಿಯಲ್ಲಿ ಸಮಸ್ಯೆಯನ್ನು ಬಗೆಹರಿಸುವಷ್ಟು ದೀರ್ಘಕಾಲದವರೆಗೆ ನಾವು ಉಳಿಯುವಂತೆ ಮಾಡುವುದಿಲ್ಲ.

ನಾವು ಸೋಲುಗಳನ್ನು ಎದುರಿಸುವಾಗ ಪ್ರಭುದ್ಧ, ವೈಯಕ್ತಿಕ ವಿಶ್ವಾಸದ ಮಹತ್ವವನ್ನು ನೋಡುತ್ತೇವೆ. ಈ ವರ್ಷ ನನ್ನ ಇಪ್ಪತ್ತು ವರ್ಷದ ಹೈಸ್ಕೂಲ ವಿದ್ಯಾರ್ಥಿಗಳ ಅನ್ಯೋನ್ಯ ಕೂಟದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ನಮ್ಮ ಹತ್ತನೆಯ ಅನ್ಯೋನ್ಯ ಕೂಟದಲ್ಲಿ, ನಾವು ಹೈಸ್ಕೂಲಿನಿಂದ ಹೊರಗೆ ಬಂದ ನಂತರ ನಮ್ಮ ಮೊದಲಿನ ಹತ್ತು ವರ್ಷಗಳಲ್ಲಿ ನಾವೆಲ್ಲರೂ ಮಹತ್ವವುಳ್ಳ ಸೋಲುಗಳನ್ನು ಎದುರಿಸಿದಂತೆ ತೋರಿತು. ಸೋಲು ನಮ್ಮ ಜೀವನಗಳ ಒಂದು ಅನಿವಾರ್ಯ ಭಾಗವಾಗಿರುತ್ತದೆ ಮತ್ತು ನಾವು ಸೋಲುಗಳನ್ನು ಹೇಗೆ ಎದುರಿಸು ತ್ತೇವೆ ಎಂಬುದು ನಾವು ಯಾರಾಗುತ್ತೇವೆಂಬುದರ ಮೇಲೆ ಬಹಳವಾಗಿ ಇರುತ್ತದೆ. ದ್ವಿತೀಯ ಹಸ್ತದ ನಂಬಿಕೆಯು ನಮ್ಮ ಸೋಲುಗಳೊಂದಿಗೆ ವ್ಯವಹರಿಸುವಲ್ಲಿ ಯಾವ ಸಹಾಯವನ್ನು ಒದಗಿಸುವದಿಲ್ಲ.

ಪೂರ್ವಜರಿಂದ ಪಡೆದು ಕೊಂಡ ನಂಬಿಕೆಯು ಸ್ವಲ್ಪ ಕಾಲಕ್ಕೆ ಸರಿಯಾಗಿರುತ್ತದೆ. ನಾವು ಹುಡುಕುವಾಗ ಮತ್ತು ಕಲಿಯುವಾಗ ಹಾಗು ಬೆಳೆಯುವಾಗ ಅದು ಒಂದು ಮಹತ್ವದ ಪಾತ್ರವಹಿಸುತ್ತದೆ. ಪ್ರಬುದ್ಧ ಜಗತ್ತನ್ನು ನಾವು ಎದುರಿಸುವಾಗ, ಮತ್ತು ಜೀವನದ ಬಿರುಗಾಳಿಗಳು ಬೀಸಲು ಪ್ರಾರಂಭಿಸುವಾಗ, ನಾವು ಎಲ್ಲಿ ನಿಂತಿದ್ದೇವೆ ಮತ್ತು ನಾವು ನಿಂತಿರುವಲ್ಲಿ ಯಾಕೆ ನಿಂತಿದ್ದೇವೆ ಎಂಬುದನ್ನು ತಿಳಿಯುವುದು ಚೆನ್ನಾಗಿರುತ್ತದೆ!

## ಯೋಹಾನ ಸುವಾರ್ತೆ ಮತ್ತು ನೀನು

ಬಲವಾದ, ಧೈರ್ಯವುಳ್ಳ, ಹೆಚ್ಚು ವೈಯಕ್ತಿಕ ನಂಬಿಕೆಯು ನಮಗಿರಬೇಕಾದ ಅಗತ್ಯತೆಗಳನ್ನು ಸಂಬೋಧಿಸಲು ಯೋಹಾನನ ಸುವಾರ್ತೆಯು ಬರೆಯಲ್ಪಟ್ಟಿತು. ಈ ಸುವಾ ರ್ತೆಯ ಅಂತ್ಯಕ್ಕೆ ಸಮೀಪದಲ್ಲಿ ಲೇಖಕನು ಅದು ಬರೆಯಲ್ಪಟ್ಟಿರುವಲ್ಲಿ ಆತ್ಮನ ಉದ್ದೇಶವನ್ನು

ವ್ಯಕ್ತಪಡಿಸಿದ್ದಾನೆ:

> ಯೇಸು ಇನ್ನು ಬೇರೆ ಎಷ್ಟೋ ಸೂಚಕ ಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು. ಅವುಗಳು ಈ ಗ್ರಂಥದಲ್ಲಿ ಬರೆದಿರುವದಿಲ್ಲ, ಆದರೆ ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದಿದೆ (20:30, 31).

ಯೋಹಾನನು ನಂಬಿಕೆಯ ಬಗ್ಗೆ ಬರೆದದ್ದು ಮತ್ತು ನಮ್ಮ ಅಧ್ಯಯನದಲ್ಲಿ ನೋಡುವಂಥದ್ದು, ಯೇಸುವು ದೇವರ ಕುಮಾರನಾಗಿರುವನೆಂಬ ಘೋಷಣೆಗಳನ್ನು ಘಟನೆಯಂತೆ ಸ್ವೀಕರಿಸುವದಕ್ಕಿಂತ ಎಷ್ಟೋ ಹೆಚ್ಚಾದದ್ದಾಗಿದೆ, ಅದು ತನ್ನ ವಾಗ್ದಾನಗಳಿಗೆ ಸತ್ಯವಾಗಿರುವನೆಂದು ಆತನನ್ನು ನಂಬುವದನ್ನು ಮತ್ತು ಆತನ ಮೇಲೆ ನಮ್ಮ ಜೀವಿತಗಳ ಪೂರ್ಣ ಭಾರವನ್ನು ಹಾಕುವದನ್ನು, ಆತನು ನಮ್ಮನ್ನು ಎತ್ತಿ ಹಿಡಿಯಬಲ್ಲನು ಮತ್ತು ಎತ್ತಿ ಹಿಡಿಯುವನು ಎಂಬುದನ್ನು ತಿಳಿಯುವದನ್ನು ಒಳಗೊಂಡಿರುತ್ತದೆ. ಈ ಸುವಾರ್ತೆಯಲೆಲ್ಲಾ, ಯೋಹಾನನು ಎಲ್ಲಾ ಕಪಟತನಗಳನ್ನು ತಪ್ಪಿಸಿಕೊಳ್ಳುವಂತೆ ನಮ್ಮನ್ನು ಕರೆಯುವ ಬೈಬಲಿನ ನಂಬಿಕೆಯು ಏನಾಗಿದೆ ಮತ್ತು ಏನಾಗಿರುವದಿಲ್ಲ ಎಂಬುದನ್ನು ಜಾಗರೂಕತೆಯಿಂದ ನಿರೂಪಿಸಿದ್ದಾನೆ. ನಮ್ಮ ಸ್ವಂತ ವಿಶ್ವಾಸವನ್ನು ಹುಡುಕುವಲ್ಲಿ ನಾವು ಸಮಾರ್ಯದವರನ್ನು ಅನುಸರಿಸಲು ಉತ್ತೇಜಿಸುವಂತೆ, ತೊಂಭತ್ತೆಂಟು ಸಲ ಪುಸ್ತಕವು ನಂಬಿಕೆಯನ್ನು ಉಲ್ಲೇಖಿಸುತ್ತದೆ. ನಾವು ಬೇಗನೇ ನೋಡುವಂತೆ, ವಿಶ್ವಾಸದ ಪಯಣವು ಸುಲಭವಾದದ್ದಾಗಲೀ, ಆರಾಮದಾಯಕವಾದದ್ದಾಗಲೀ ಇರುವುದಿಲ್ಲ. ಪೀಡಿಸುವಂಥ ಪ್ರಶ್ನೆಗಳನ್ನು ಎದುರಿಸಬೇಕು, ಮತ್ತು ಅತೀ ಬೆಲೆಯುಳ್ಳ ತೀರ್ಮಾನಗಳನ್ನು ಮಾಡತಕ್ಕದ್ದು, ಪಯಣವು ಯಾವುದೇ ಕ್ರಯಕ್ಕೆ ಯೋಗ್ಯವಾದದ್ದಾಗಿದೆ, ಯಾಕೆಂದರೆ ಪರಿಣಾಮವು ದೇವರ ಕುಮಾರನಾದ ಕ್ರಿಸ್ತನಂತೆ ಯೇಸುವಿನಲ್ಲಿ ವೈಯಕ್ತಿಕ ನಂಬಿಕೆಯಾಗಿದೆ, ಆತನಲ್ಲಿ ನಮಗೆ ನಿತ್ಯ ಜೀವವು ಇರುತ್ತದೆ!

## ಮುಕ್ತಾಯ

ಸಿ. ಎಸ್. ಲೂವಿಸರ *Chronicles of Narnia*ದ ಪ್ರಾರಂಭವು, ಜಾಗತಿಕ ಎರಡನೆಯ ಮಹಾ ಯುದ್ಧದ ಸಮಯದಲ್ಲಿಯ ಬಾಂಬ್ ದಾಳಿಗಳಿಂದ ತಪ್ಪಿಸಿಕೊಳ್ಳಲು ಲಂಡನ್ನಿನಿಂದ ಗ್ರಾಮದಲ್ಲಿಯ ಒಂದು ಮನೆಗೆ ಸುರಕ್ಷಿತತೆಗಾಗಿ ಕಳುಹಿಸಲ್ಪಟ್ಟ ಚಿಕ್ಕ ಮಕ್ಕಳ ಒಂದು ಗುಂಪಿನ ಬಗ್ಗೆ ಹೇಳುತ್ತದೆ. ಅಲೆದಾಡಲು ಮತ್ತು ಪರಿಶೋಧಿಸಲು ಬಹಳ ಕೋಣೆಗಳಿರುವ ದೊಡ್ಡ ಮನೆಯಲ್ಲಿ ವಾಸಿಸಲು ಆ ಮಕ್ಕಳು ಹೋದರು. ಒಂದು ದಿನ ಅವರು ಆಟವಾಡುತ್ತಿದ್ದಂತೆ, ಲೂಸಿಯು ಒಂದು ದೊಡ್ಡ ಬಟ್ಟೆಗಳನ್ನಿಡುವ ಬೀರುವಿನ ಕೋಣೆಯನ್ನು ಪ್ರವೇಶಿಸಿದಳು. ಅದರ ಹಿಂದೆ ಆಕೆ ನಡೆದು ಹೋದಾಗ ಅದು ಅಡವಿಯೊಳಕ್ಕೆ ತೆರೆದಿರುವದನ್ನು ಆಕೆ ನೋಡಿದಳು. ಆಕೆ ನಡೆಯುತ್ತ ಮುಂದೆ ಹೋದಂತೆ, ಆಕೆ ತಾನು ಹಿಮದಲ್ಲಿ ನಡೆಯುತ್ತಿರುವದನ್ನು ಕಂಡು ಕೊಂಡಳು. ಅನಂತರದಲ್ಲಿ ಆಕೆ ಬಟ್ಟೆಗಳನ್ನಿಡುವ ಬೀರುವಿನೊಳಗೆ ನಡೆದದ್ದರಿಂದ, ಆಕೆ ನಾರ್ನಿಯಾ ಪ್ರದೇಶದೊಳಗೆ ಪ್ರವೇಶಿಸಿದ್ದೇನೆಂದು ಕಂಡುಕೊಂಡಳು.

ಯೋಹಾನನ ಸುವಾರ್ತೆಯು ಒಂದು ರೀತಿಯಲ್ಲಿ ಹಾಗೆಯೇ ಇರುತ್ತದೆ. ಅದು ಮೊದಲು ಯೇಸುವಿನ ಬಗ್ಗೆ ಮತ್ತು ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಜೀವಿಸಿದ ಕೆಲವು ಜನರ ಬಗ್ಗೆ ಒಂದು ಪುಸ್ತಕದಂತೆ ಕಾಣುತ್ತದೆ. ಯೇಸು ಮತ್ತು ಬಾವಿಯ ಬಳಿಯಲಿದ್ದ ಸ್ತ್ರೀ, ಯೇಸು ಮತ್ತು ಕುರುಡನಾಗಿ ಹುಟ್ಟಿದ ಮನುಷ್ಯ, ಯೇಸು ಮತ್ತು ಕಾನದಲ್ಲಿ ಮದುವೆಯ ಅತಿಥಿಗಳು, ಹೀಗಿದ್ದರು ಈ ಕಥೆಗಳನ್ನು ನಾವು ಓದುತ್ತ, ಅಧ್ಯಯನ ಮಾಡಿದಂತೆ ಒಂದು

ಅದ್ಭುತಕರವಾದದ್ದು ಸಂಭವಿಸುತ್ತದೆ; ನಾವು "ಬಟ್ಟೆಗಳನ್ನಿಡುವ ಬೀರುವನ್ನು" ಪ್ರವೇಶಿಸುತ್ತೇವೆ ಮತ್ತು ನಮ್ಮನ್ನು ಯೇಸುವಿನೊಂದಿಗೆ ಮುಖಾಮುಖಿಯಾಗಿ ಕಂಡುಕೊಳ್ಳುತ್ತೇವೆ. ಅಲ್ಲಿ ಆತನನ್ನು ಆಲಿಸುತ್ತ, ಗಮನಿಸುತ್ತ, ಮತ್ತು ಆತನೊಂದಿಗೆ ಚರ್ಚಿಸುತ್ತ, ಮಾನವ ಕುಲಕ್ಕೆ ತಿಳಿದಿರುವಂಥ ಅತ್ಯಂತ ಮಹತ್ವದ ಹಾಗು ಕುತೂಹಲಭರಿತವಾದ ಪ್ರಯಾಣವನ್ನು - ವಿಶ್ವಾಸದ ಪಯಣವನ್ನು ತೆಗೆದುಕೊಳ್ಳುತ್ತೇವೆ!

ಒಟ್ಟಾಗಿ ನಾವು ಈ ಅಧ್ಯಯನವನ್ನು ಪ್ರಾರಂಭಿಸುವಂತೆ, ನೀವು ಮೊದಲು ಒಂದು ಒಪ್ಪಂದವನ್ನು ಮಾಡಿಕೊಂಡು ಆಮೇಲೆ ಒಂದು ಗುರಿಯನಿಟ್ಟುಕೊಳ್ಳ ಬೇಕೆಂದು ನಾನು ಆಹ್ವಾನಿಸುತ್ತೇನೆ. ಒಪ್ಪಿಸಿಕೊಡುವಿಕೆಯು, "ನಾನು ನನ್ನ ಜೀವದಿಂದ ಆತನನ್ನು ನಂಬಬಹುದೋ?" ಎಂಬ ಗಲಿಬಿಲಿಗೊಳಿಸುವ ಪ್ರಶ್ನೆಯನ್ನು ನಿನಗೆ ನೀನೆ ಕೇಳಿಕೊಳ್ಳುತ್ತ ಯೇಸುವಿನ ಜೀವನದಲ್ಲಿ ಆಳವಾಗಿ ನೋಡಲು ಧೈರ್ಯಗೊಳ್ಳುವುದಾಗಿದೆ, ನಿಮಗಾಗಿ ನೀವೆ ಇಟ್ಟುಕೊಳ್ಳಬೇಕೆಂದು ನಾನು ಆಹ್ವಾನಿಸುವ ಗುರಿಯು ಯೇಸುವಿನ ಬಗ್ಗೆ ಇತರರು ಹೇಳಿದ ಮಾತುಗಳ ಮೇಲೆ ಅವಲಂಭಿಸಿರುವದಕ್ಕಿಂತ ಹೆಚ್ಚಾಗಿ ಯೇಸುವಿನೊಂದಿಗಿನ ನಿನ್ನ ಸಂದರ್ಶನದ ಮೇಲೆ ಅವಲಂಭಿಸಿರುವ ವಿಶ್ವಾಸವಾಗಿರಬೇಕು. ಈ ಸಮರ್ಪಣೆಯು ಹಾಗು ಈ ಗುರಿಯು, ನೀನು ಹದಿಮೂರು ವರ್ಷದವನಾಗಿರಲೀ ಇಲ್ಲವೇ ತೊಂಭತ್ತೂರು ವರ್ಷದವನಾಗಿರಲಿ, ನೀನು ಕ್ರೈಸ್ತನಾಗಿರದೇ ಇರಲಿ ಇಲ್ಲವೇ ಅರವತ್ತು ವರ್ಷಗಳವರೆಗೆ ಕ್ರೈಸ್ತನಾಗಿರಲಿ, ಬಹಳ ಮಹತ್ವವುಳ್ಳವುಗಳಾಗಿವೆ. ನಿನ್ನ ಜೀವನದ ಅತೀ ಮಹತ್ವದ ಪ್ರಯಾಣವಾಗುವದರ ಮೇಲೆ, ವಿಶ್ವಾಸದ ಪಯಣದ ಮೇಲೆ ಉಳಿದ ನಮ್ಮೊಂದಿಗೆ ನೀನು ಸೇರಿಕೊಳ್ಳುವಿಯೋ? ಈ ಆಹ್ವಾನವನ್ನು ಧ್ಯಾನಿಸುವಂತೆ, ಈ ಸಂಗೀತದ ಪ್ರಾರ್ಥನಾ ಪೂರ್ವಕವಾದ ಮಾತುಗಳನ್ನು ಯೋಚಿಸು:

> ನಮ್ಮ ಕಣ್ಣುಗಳನ್ನು ತೆರೆ, ಕರ್ತನೆ, ನಾವು ಯೇಸುವನ್ನು ನೋಡಲು ಬಯಸುವೆವು,
> ಆತನನ್ನು ತಲುಪುವದಕ್ಕೆ ಮತ್ತು ಸ್ಪರ್ಶಿಸಲಿಕ್ಕೆ ಮತ್ತು ಆತನನ್ನು ಪ್ರೀತಿಸುವೆವೆಂದು
> ಹೇಳಲಿಕ್ಕೆ.
> ನಮ್ಮ ಕಿವಿಗಳನ್ನು ತೆರೆ, ಕರ್ತನೆ, ಆಲಿಸಲಿಕ್ಕೆ ಸಹಾಯ ಮಾಡು.
> ನಮ್ಮ ಕಣ್ಣುಗಳನ್ನು ತೆರೆ, ಕರ್ತನೆ, ನಾವು ಯೇಸುವನ್ನು ನೋಡಲು ಬಯಸುವೆವು.[3]

ಟಿಪ್ಪಣಿಗಳು

[1]Stephen Covey, *7 Habits of Highly Effective People* (New York: Simon & Schuster, 1989), 98. [2]Ibid. [3]"Open Our Eyes, Lord," Bob Cull. Copyright 1976 by Maranatha! Music. (Administered by The Copyright Company, Nashville, Tenn.) All rights reserved. International copyright secured. Used by permission.